**ಕೃಷಿ ಪಾಸ್ ಬುಕ್**

1766 - ಶ್ರೀ ಜಗದೀಶ ತಿಮ್ಮಣ್ಣಗೌಡ ಪಾಟೀಲ (ಬೀಳಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕೃಷಿ ಪಾಸ್ ಬುಕ್ ಕೊಡುವ ಭರವಸೆಯನ್ನು ಸರಕಾರ ಕೊಟ್ಟಿದ್ದು ನಿಜವಲ್ಲವೇ?*
2. *ಹಾಗಿದ್ದಲ್ಲಿ ಈ ದಿಕ್ಕಿನಲ್ಲಿ ಸರಕಾರ ಕೈಗೊಂಡ ಕ್ರಮಗಳೇನು?*
3. *ನಿರ್ದಿಷ್ಟವಾಗಿ ಎಷ್ಟು ಅವಧಿಯಲ್ಲಿ ಅವರಿಗೆ ಪಾಸ್ ಬುಕ್‌ಗಳ ವಿತರಣೆ ಮಾಡಲಾಗುವುದು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

1. ಹೌದು.

2. ಕೃಷಿ ಪಾಸ್ ಪುಸ್ತಕಕ್ಕೆ ಇನ್ನೂ ಹೆಚ್ಚಿನ ಮಾಹಿತಿ ಸೇರಿಸಿ ತಿದ್ದುಪಡಿ ತಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಪರಿಷ್ಕೃತಗೊಂಡ ಕೃಷಿ ಸಾಲ ಪಾಸ್ ಪುಸ್ತಕ ವಿತರಿಸಬೇಕಾದಲ್ಲಿ ಅಂದಾಜು ವೆಚ್ಚ 30 ಕೋಟಿ (ಮೂವತ್ತು ಕೋಟಿ) ರೂ. ಬೇಕಾಗಿದ್ದು ಈ ಬಗ್ಗೆ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ತರಲಾಗಿ, ಸಚಿವ ಸಂಪುಟವು ಪ್ರತಿ ಕಂದಾಯ ವಿಭಾಗದಲ್ಲಿ, ತಲಾ ಒಂದು ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಹಂಚಿಕೆ ಮಾಡಲು ಅನುಮೋದನೆ ನೀಡಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

3. ಮೇಲೆ ತಿಳಿಸಿದಂತೆ ಪರಿಷ್ಕೃತಗೊಂಡ ಕೃಷಿ ಪಾಸ್ ಪುಸ್ತಕವನ್ನು ಹಂಚುವ ಬಗ್ಗೆ 4 ಕಂದಾಯ ವಿಭಾಗಗಳಲ್ಲಿಯೂ ತಲಾ ಒಂದು ಜಿಲ್ಲೆಯನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿರುವುದರಿಂದ ಈ ಪ್ರಯೋಗದಿಂದ ಅಪೇಕ್ಷಿತ ಫಲಿತಾಂಶ (desired result) ದೊರೆತ ನಂತರ ಇತರೆ ಜಿಲ್ಲೆಗಳಿಗೆ ಆದಷ್ಟು ಬೇಗ ಕೃಷಿ ಪಾಸ್ ಪುಸ್ತಕ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

**ಗ್ರಾಮೀಣ ಭಾಗದಲ್ಲಿ ಸಾರಿಗೆ ವ್ಯವಸ್ಥೆ**

1767 - ಶ್ರೀ ಜಗದೀಶ್ ತಿಮ್ಮಣ್ಣಗೌಡ ಪಾಟೀಲ್ (ಬೀಳಗಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮೀಣ ಭಾಗದಲ್ಲಿ ಸಾರಿಗೆ ವ್ಯವಸ್ಥೆಗೆ ಕೈಗೊಂಡ ಕ್ರಮಗಳೇನು?*

ಆ) *ಬಾಗಲಕೋಟೆ ಸಾರಿಗೆ ಡಿವಿಜನ್ ವ್ಯಾಪ್ತಿಯಲ್ಲಿ ಬರುವ ಬಿಳಗಿ ತಾಲ್ಲೂಕಿನ ಅನಗವಾಡಿ, ಕಾತರಕಿ, ಅಲಗುಂದಿ ಮುಖಾಂತರ ಹೋಗುವ ರಸ್ತೆ ಜಿಲ್ಲೆಯ ಮುಖ್ಯ ರಸ್ತೆಗಳಲ್ಲಿ ಇದು ಒಂದಾಗಿದ್ದು ಕಳೆದ 4 ವರ್ಷಗಳಲ್ಲಿ ಅರ್ಧಕ್ಕಿಂತ ಹೆಚ್ಚು ಬಸ್ ರೂಟ್‌ಗಳನ್ನು ಒದಗಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಈ ಭಾಗದ ಜನರ ತೊಂದರೆ ನಿವಾರಿಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುವರೆ?*

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗ್ರಾಮೀಣ ಭಾಗದಲ್ಲಿ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 30.4.99ರಂದು ಒಟ್ಟು 5276 ಅನುಸೂಚಿಗಳನ್ನು ಆಚರಣೆ ಮಾಡುತ್ತಿದ್ದು ಇವುಗಳಲ್ಲಿ 2154 ಅನುಸೂಚಿಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಓಡಿಸುತ್ತಿದೆ.

2. ರಾಷ್ಟ್ರೀಕೃತ ವಲಯದಲ್ಲಿನ ಪ್ರತಿ ಗ್ರಾಮಕ್ಕೂ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸಂಸ್ಥೆಯು ಕ್ರಮಗಳನ್ನು ತೆಗೆದುಕೊಂಡಿದೆ. ರಾಷ್ಟ್ರೀಕೃತ ವಲಯದಲ್ಲಿರುವ ಒಟ್ಟು 9474 ಗ್ರಾಮಗಳ ಪೈಕಿ 8546 ಗ್ರಾಮಗಳಿಗೆ ಸಂಸ್ಥೆಯ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಉಳಿದ 928 ಗ್ರಾಮಗಳ ರಸ್ತೆಗಳು ಬಸ್ ಓಡಾಟಕ್ಕೆ ಯೋಗ್ಯವಾಗಿರುವುದಿಲ್ಲ. ಈ ಗ್ರಾಮಗಳಿಗೆ ಬಸ್ ಓಡಾಟಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಿಸಿದ ನಂತರ ಸಾರಿಗೆ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

3. ರಾಷ್ಟ್ರೀಕೃತ ವಲಯದಲ್ಲಿನ ಗ್ರಾಮೀಣ ಪ್ರಯಾಣಿಕರಿಗೆ ಹೆಚ್ಚಿನ ಸಾರಿಗೆ ಸೌಲಭ್ಯ ಒದಗಿಸುವ ದೃಷ್ಟಿಯಿಂದ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಂದ 20 ರಿಂದ 40 ಕಿ.ಮಿ. ಸುತ್ತಳೆಯಲ್ಲಿರುವ ಗ್ರಾಮಗಳಿಗೆ ಎರಡು ಬಾಗಿಲುಳ್ಳ ನಗರ ಸಾರಿಗೆ ಮಾದರಿಯ 492 ಬಸ್ಸುಗಳನ್ನು ಓಡಿಸಲಾಗುತ್ತಿದೆ.

4. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಖಾಸಗಿ ಬಸ್ಸುಗಳು ಕಾರ್ಯಾಚರಣೆ ಮಾಡುವುದರಿಂದ ಸಂಸ್ಥೆಯ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸುವುದು ಸಂಸ್ಥೆಯ ಆರ್ಥಿಕ ದೃಷ್ಟಿಯಿಂದ ಸಮಂಜಸವಲ್ಲ. ಆದಾಗ್ಯೂ, ಪ್ರಯಾಣಿಕರ ಹೆಚ್ಚಿನ ಬೇಡಿಕೆ ಇರುವಂತಹ ಹಾಗೂ ಉತ್ತಮ ಆದಾಯ ಬರುವಂತಹ ಮಾರ್ಗಗಳಲ್ಲಿ ಸಂಸ್ಥೆಯು ಬಸ್ಸುಗಳನ್ನು ಓಡಿಸುತ್ತಿದೆ. ರಾಷ್ಟ್ರೀಕೃತವಲ್ಲದ ವಲಯದಲ್ಲಿನ ಒಟ್ಟು 14302 ಗ್ರಾಮಗಳ ಪೈಕಿ 7022 ಗ್ರಾಮಗಳಿಗೆ ಸಂಸ್ಥೆಯ ವತಿಯಿಂದ ಸಾರಿಗೆ ಸೌಲಭ್ಯ ಒದಗಿಸಲಾಗುತ್ತದೆ.

5. ಮಾರ್ಚ್ 1997ರಲ್ಲಿ 4842 ಇದ್ದ ಅನುಸೂಚಿಗಳನ್ನು ಮಾರ್ಚ್ 99ರಲ್ಲಿ 5241ಗಳಿಗೆ ಹೆಚ್ಚಿಸಲಾಗಿದೆ. 1999-2000ರಲ್ಲಿ 300 ಹೊಸ ಅನುಸೂಚಿಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

6. 1997- 98ರಿಂದ ಇದುವರೆಗೆ 6 ಹೊಸ ಘಟಕಗಳನ್ನು ಪ್ರಾರಂಭಿಸಲಾಗಿದೆ.

7. ಕಾರ್ಯಾಚರಣೆಯ ಮೇಲೆ ಉತ್ತಮ ರೀತಿಯ ನಿಯಂತ್ರಣವನ್ನು ಹೊಂದಲು 3 ಹೊಸ ವಿಭಾಗಗಳನ್ನು ಪ್ರಾರಂಭಿಸಲಾಗಿದೆ.

8. 1997-98ರಿಂದ ಇದುವರೆಗೆ 1985 ಹೊಸ ಬಸ್ಸುಗಳನ್ನು ಕಾರ್ಯಾಚರಣೆಗೆ ಸೇರಿಸಲಾಗಿದೆ.

ಅ) ಹೌದು. ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೀಳಗಿ ತಾಲ್ಲೂಕಿನ ಅನಗವಾಡಿ, ಕಾತರಕಿ ಅಲಗುಂಡಿ ಮುಖಾಂತರ ಹೋಗುವ ಸಾರಿಗೆಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಕೇವಲ ಮೂರು ಅನುಸೂಚಿಗಳನ್ನು ಮಾತ್ರ ಮಾರ್ಗ ಬದಲಾವಣೆ ಮಾಡಲಾಗಿದೆ ಅವುಗಳು (1) ಬಾಗಲಕೋಟೆ-ಸಾಂಗಲಿ ಅನುಸೂಚಿ - (2) ಬಾದಾಮಿ ಕೆಜಾಲ್ಲಾಪೂರ ಅನುಸೂಚಿ - 2

ಸದರೀ ಅನುಸೂಚಿಗಳು ಅನಗವಾಡಿ ಕಾತರಕಿ ಅಲಗುಂಡಿ ಮಾರ್ಗದ ಮೇಲೆ ಓಡುವಾಗ ಅವುಗಳ ಜನದಟ್ಟಣೆ ಹಾಗೂ ಪ್ರತಿ ಕಿ.ಮೀ.ಗಳ ಆದಾಯ ಬಹಳ ಕಡಿಮೆ ಆಗಿದ್ದುದರಿಂದ ಸದರೀ ಅನುಸೂಚಿಗಳನ್ನು ಪರಿಷ್ಕರಿಸಲಾಗಿದೆ.

ಇ) ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಒಟ್ಟು 729 ಹಳ್ಳಿಗಳ ಪೈಕಿ ಕೇವಲ 15 ಹಳ್ಳಿಗಳಿಗೆ ರಸ್ತೆ ಸಂಪರ್ಕ ಇಲ್ಲದೆ ಇರುವುದರಿಂದ ಸಾರಿಗೆ ಸೌಕರ್ಯವನ್ನು ಒದಗಿಸಿಲ್ಲ. ಬೀಳಗಿ ತಾಲ್ಲೂಕಿನ 65 ಹಳ್ಳಿಗಳ ಪೈಕಿ 64 ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು ಶಿವಾಪೂರ ಎಂಬ ಒಂದು ಗ್ರಾಮಕ್ಕೆ ರಸ್ತೆ ಸಂಪರ್ಕ ಇಲ್ಲದೇ ಇರುವುದರಿಂದ ಸಾರಿಗೆ ಸೌಕರ್ಯ ಒದಗಿಸಲಾಗಿಲ್ಲ.

ಬಾಗಲಕೋಟೆ ವಿಭಾಗದ ಗ್ರಾಮೀಣ ಭಾಗದಲ್ಲಿ ಪ್ರತಿ ದಿನ 130 ಅನುಸೂಚಿಗಳಿಂದ ಸರಾಸರಿ 56081 ಕಿ.ಮೀ.ಗಳ ಸಾರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ.

ಅನಗವಾಡಿ, ಕಾತರಕಿ, ಅಲಗುಂಡಿ ಗ್ರಾಮದ ಜನರಿಗೆ

(1) ಬಾಗಲಕೋಟೆ - ಬೀಕಲಗುಂಡಿ ಮಾರ್ಗ ಅನಗವಾಡಿ ಕಾತರಕಿ 2 ಸರತಿಗಳನ್ನು.

(2) ಬಾಗಲಕೋಟೆ-ಬೀಳಗಿ ಮಾರ್ಗ ಅನಗವಾಡಿ-ಕಾತರಕಿ, ಚಾನಮಟ್ಟಿ, ಸುನಗ, ಒಂದು ಸರತಿಯನ್ನು ಹಾಗೂ ಈ ಭಾಗದ ಜನರ ಅನುಕೂಲಕ್ಕಾಗಿ ಹೆಚ್ಚಿನ ನಗರ ಸಾರಿಗೆ ಮಾದರಿಯ ಬಸ್ಸುಗಳನ್ನು ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಮುಧೋಳ ಘಟಕದಿಂದ 07 ಸುತ್ತುಗಳ ಸರತಿಗಳನ್ನು ಹಾಗೂ ಬಾಗಲಕೋಟೆಯಿಂದಾ 4 ಸುತ್ತುಗಳ ಸರತಿಗಳನ್ನು ಓಡಿಸಲಾಗುತ್ತಿದೆ. ಹಾಗೂ ಮೇಲಿನ ಗ್ರಾಮಗಳಿಗೆ ಎರಡು ಬಾಗಿಲುಗಳ ವಾಹನಗಳನ್ನು ಓಡಿಸಲು ಯೋಚಿಸಲಾಗಿದೆ.

**ಆನೇಕಲ್ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ**

1768- ಶ್ರೀ ಎ. ನಾರಾಯಣ ಸ್ವಾಮಿ (ಆನೇಕಲ್ಲು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಆನೇಕಲ್ ಕ್ಷೇತ್ರದಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ 8 ವರ್ಷಗಳಿಂದ ನಿವೇಶನ ಹಂಚಿದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*